ಅಂಥವರಿಗೆ ಕಾರ್ಡ್ ಕೊಡುವಂಥಾದ್ದಕ್ಕೆ ಶಾಶ್ವತವಾದಂತಹ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾಡಲಾಗಿದೆ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು ಅದರಲ್ಲಿ ಸದಸ್ಯರಾಗಿರುತ್ತಾರೆ, ಮತ್ತೆ ನಮ್ಮ ಆಹಾರ ಇಲಾಖೆಯ ಉಪ ನಿರ್ದೇಶಕರೂ ಸಹ ಅದರಲ್ಲಿ ಇರುತ್ತಾರೆ. ಈ ಸರ್ವೆ ಕೆಲಸವನ್ನು ಕೇವಲ ರೆವಿನ್ಯೂ ಇಲಾಖೆಯಿಂದ ಮಾತ್ರ ಮಾಡಿಸಬೇಕೆಂದರೆ ಆದು ಸಾಧ್ಯಾಗುವುದಿಲ್ಲ. ರೆವಿನ್ಯೂ ಇಲಾಖೆಯಲ್ಲಿ ಅಷ್ಟೊಂದು ಸಿಬ್ಬಂದಿ ಇರಲು ಸಾಧ್ಯವಿಲ್ಲ. ಅದಕ್ಕಾಗಿ ಸರ್ವೆ ಕೆಲಸಕ್ಕೆ ಗ್ರಾಮಪಂಚಾಯತ್‌ನ ಸೆಕ್ರೆಟರಿಗಳನ್ನು, ಮತ್ತು ಗ್ರಾಮ ಸೇವಕರನ್ನು ಮತ್ತು ಅಂಗನವಾಡಿ ಕಾರ್ಯಕರ್ತರನ್ನು, ಮತ್ತು ನಮ್ಮ ಇಲಾಖೆಯ ಆಹಾರ ನಿರೀಕ್ಷಕರನ್ನು ಎಲ್ಲರನ್ನೂ ಉಪಯೋಗಿಸಿಕೊಂಡು ಸರ್ವೆ ಕೆಲಸ ಮಾಡಿರುವಂಥಾದ್ದು ಇದೆ. ಇಲ್ಲಿ ಯಾರಾದರೂ ಗುಳೀ ಹೋಗಿರುವಂಥವರನ್ನು ಡೋರ್ ಲಾಕ್ ಎಂದು ಬರೆದುಕೊಂಡು ಬಂದಿರುತ್ತಾರೆ. ಈ ಡೋರ್ ಲಾಕ್ ಪ್ರಸಂಗಗಳು ಏನಾದರೂ ಇದ್ದರೆ, ಅಂತಹವರನ್ನು ಮತ್ತೊಮ್ಮೆ ತಹಶೀಲ್ದಾರರಿಗೆ ಅರ್ಜಿಯನ್ನು ಕೊಡಲು ತಿಳಿಸಿ, ಅವರೆಲ್ಲರನ್ನೂ ಇನ್‌ಕ್ಲೂಡ್ ಮಾಡುವುದಕ್ಕೆ ನಾನು ಇವತ್ತೇ ಆದೇಶವನ್ನು ಮಾಡುತ್ತೇನೆ.

ಬೀಜ ಮಸೂದೆಯ ಜಾರಿ

47 (278) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೀಜ ಮಸೂದೆಯ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು; ಪ್ರಸ್ತಾವಿತ ಬೀಜ ಮಸೂದೆಯು ರೈತರ ಹಿತರಕ್ಷಣೆಗೆ ಪೂರಕವಾಗಿದೆಯೇ?

ಆ. ಅತ್ಯಂತ ಕಡಿಮೆ ಬಂಡವಾಳ ಮತ್ತು ಪೂರಾತನ ಕೃಷಿ ತಂತ್ರಜ್ಞಾನದಿಂದ ಕೂಡಿದ ಕೃಷಿ ಪದ್ಧತಿಯನ್ನು ಸಂರಕ್ಷಿಸುವಲ್ಲಿ ಈ ಮಸೂದೆಯಲ್ಲಿ ಅಡಕವಾಗಿರುವ ಅಂಶಗಳೇನು;

ಇ. ಮಸೂದೆಯು ಜಾರಿಗೆ ಬರುವಲ್ಲಿ ರಾಜ್ಯ ಸರ್ಕಾರದ ಪಾತ್ರವೇನು;

ಈ. 1966 ಬೀಜ ಕಾಯಿದೆ ಅನ್ವಯ ಕೃಷಿಕರಿಗೆ ನೀಡಲಾಗಿದ್ದ ಬೀಜದ ಹಕ್ಕು ಸಮಗ್ರವಾಗಿ ಮುಂದುವರೆಯುವಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರವನ್ನು ಕೋರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು) :

ಅ. ಬೀಜ ಮಸೂದೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೊಳಪಡುತ್ತದೆ. ಅಂತಿಮವಾಗಿ ಇದನ್ನು ಸಂಸತ್ತಿನಲ್ಲಿ ಅಂಗೀಕೃತವಾಗ ಬೇಕಾಗಿರುತ್ತದೆ. ಹಾಲಿ ಇದು ಕರಡು ರೂಪದಲ್ಲಿದ್ದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆದಿರುತ್ತದೆ.

ಆ. ಸದರೀ ಮಸೂದೆಯಲ್ಲಿ ಕ್ಯಾಪಿಟಲ್ ಕಾಸ್ಟ್ ಹಾಗು ಪುರಾತನ ಕೃಷಿ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲ ಪ್ರಸ್ತಾಪಿತ ಮಸೂದೆಯಲ್ಲಿ ಮಾರಾಟ ಮಾಡಲಾದ ಬೀಜದ ಬಗ್ಗೆ ಸಂಬಂಧಪಟ್ಟವರ ಜವಾಬ್ದಾರಿ; ತಳಿಗಳ ನೊಂದಾವಣೆಯ ಕಡ್ಡಾಯ ಹಾಗೂ ಕಠಿಣ ಶಿಕ್ಷೆಯನ್ನು ಒಳಗೊಂಡಿರುತ್ತದೆ.

ಈ. ಹೌದು.

ಶ್ರೀ ಜೆ.ಕೃಷ್ಣ ಪಾಲೇಮರ್ : ಮಾನ್ಯ ಅಧ್ಯಕ್ಷರೆ, ಬೀಜ ಮಸೂದೆಯ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆದಿರುತ್ತದೆಂದು ಉತ್ತರವನ್ನು ಕೊಟ್ಟಿದ್ದಾರೆ. ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದು ಕೇವಲ ಕಾರ್ಯದರ್ಶಿಗಳ ಮಟ್ಟದಲ್ಲೇ ಅಭಿಪ್ರಾಯವನ್ನು ಕೊಡಲಾಗಿದೆಯೇ? ಇದರ ಬಗ್ಗೆ ಸದನದಲ್ಲಿ ಏನಾದರೂ ಚರ್ಚೆ ಆಗಿದೆಯಾ? ಇದು ಗಂಭೀರವಾದ ವಿಚಾರವಾಗಿರುವುದರಿಂದ ಈ ವಿಷಯದಲ್ಲಿ ಸದನದಲ್ಲಿ ಚರ್ಚೆಯಾಗಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪುರ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ ಈಗಾಗಲೇ ಕೇಂದ್ರ ಸರ್ಕಾರ ಸೀಡ್ ಬಿಲ್ 2004 ಅನ್ನು ತರುತ್ತಾ ಇದೆ. ಈ ಬಿಲ್ ಅನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರ ರೂಪಿಸುವಂಥಾದ್ದು. ಆದರೆ ನಮ್ಮ ರಾಜ್ಯಸರ್ಕಾರದ ಮುಖಾಂತರ ನಮ್ಮ ಸಲಹೆಗಳನ್ನು ಕೊಡಬೇಕಾಗುತ್ತದೆ. ಈಗಾಗಲೇ ಇದರ ಬಗ್ಗೆ ಬಹಳಷ್ಟು ಅಧಿಕಾರಿಗಳ ಮಟ್ಟದಲ್ಲಿ ಮತ್ತೆ ಸದನದಲ್ಲಿ ಚರ್ಚೆಯಾಗಿ ಕೆಲವೂ ಸಲಹೆಗಳನ್ನು ಸರ್ಕಾರದ ವತಿಯಿಂದ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಹಾಗೆ ಕಂಪ್ಲೀಟ್ ಡೀಟೈಲ್ ತರಿಸಿ ಅವರಿಗೆ ಕೊಡುತ್ತೇನೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದು ಶೇಕಡ 70ರಷ್ಟು ರೈತರ ಬದುಕಿಗೆ ಸಬಂಧಪಟ್ಟಂತಹ ವಿಚಾರವಾಗಿದೆ. ಪುರಾತನ ಪರಂಪರಾಗತ ಕೃಷಿಯ ಬಗ್ಗೆ ಇದರಲ್ಲಿ ಏನೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಬೀಜ ಮಸೂದೆ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ. ದೇಶದಲ್ಲಿ ಇವತ್ತು ವಿದೇಶದ ಕಂಪನಿಗಳು ಸಾಕಷ್ಟು ತಮ್ಮ ಪ್ರಭಾವವನ್ನು ಬೀರಿ ಈ ಮಸೂದೆಯನ್ನು ಪಾಸು ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಪ್ರಯತ್ನವನ್ನು ಮಾಡುತ್ತಿವೆ. ಇದರಿಂದ ನಮ್ಮ ರೈತರ ಸ್ವಾತಂತ್ರ್ಯವೇ ಹೊರಟು ಹೋಗುತ್ತದೆ.

ಅಧ್ಯಕ್ಷರು : ಈಗ ಒಂದು ಗಂಟೆಯೊಳಗೆ ಪ್ರಶ್ನೋತ್ತರ ಕಲಾಪ ಮುಗಿಯಬೇಕು. ಒಂದೊಂದು ಪ್ರಶ್ನೆಗೆ ಹತ್ತು ನಿಮಿಷಗಳನ್ನು ತೆಗೆದುಕೊಂಡರೆ ಕಷ್ಟವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ರೈತರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ವಿದೇಶಿ ಕಂಪೆನಿಗಳು ರೈತರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಈ ವಿಷಯದ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕು. ನಮ್ಮ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕೆಂಬ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯಕ್ಕ ಸಂಬಂಧಪಟ್ಟಂತೆ ಮಾನ್ಯ ಜೆ.ಕೆ. ಕೃಷ್ಣ ಪಾಲೇಮಾರ್‌ರವರು ಉಪ ಪ್ರಶ್ನೆಯನ್ನು ಕೇಳಬೇಕು. ಈ ರೀತಿ ಬೇರೆ ಬೇರೆ ಸದಸ್ಯರುಗಳು ಕೇಳಿದರೆ ನಾನು ಅವಕಾಶವನ್ನು ಮಾಡಿಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪುರ್ : ಮಾನ್ಯ ಅಧ್ಯಕ್ಷರೆ, ನಾವು ಈಗ ಕೇಂದ್ರ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ತಮ್ಮ ಸಲಹೆಗಳು ಏನಾದರೂ ಇದ್ದರೆ ಅದನ್ನು ಇದರಲ್ಲಿ ಅಳವಡಿಸಿಕೊಂಡು ಸರ್ಕಾರ ರೆಕಮಂಡ್ ಮಾಡುತ್ತದೆನ್ನುವ ಎನ್ನು ವಿಚಾರವನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ರಾಜೇಂದ್ರವರ್ಮ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಾನು ಕೆಲವು ಪ್ರಮುಖ ವಿಷಯಗಳನ್ನು ಹೇಳಲಿಚ್ಚಿಸುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಅನೇಕ ನಾಲೆಗಳು ಬಹಳ ವರ್ಷಗಳಿಂದ ತುಂಬಿ ಹರಿದು ಮಣ್ಣು ಜಮಾಯಿಸಿದೆ. ಈ ಮಣ್ಣಿನಿಂದ ನೀರು ಹರಿಯುವಾಗ ನಾಲೆಯ ಹತ್ತಿರ ಇರುವಂತಹ ಜಮೀನು ಸುಮಾರು ಒಂದು ಸಾವಿರ ಎರಡು ಸಾವಿರ ಎಕರೆಗೆ ಯಾವಾಗಲೂ ನೀರು ಹರಿದು ಅಲ್ಲಿ ಬೆಳೆ ನಾಶವಾಗುತ್ತದೆ. ಆದುದರಿಂದ ದಯಮಾಡಿ ವಾಟರ್‌ಶೆಡ್ ಕಾರ್ಯಕ್ರಮದಡಿ ಹೂಳು ಎತ್ತುವಂತಹ ಕೆಲಸಮಾಡಿ ಆ ರೈತರ ಬೆಳೆಯನ್ನು ಉಳಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ನಾನು ಕೇಳಲಿಚ್ಚಿಸುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ ಸರ್ಕಾರ ಕೊಟ್ಟಿರುವ ಉತ್ತರಲ್ಲಿ ಕ್ಯಾಪಿಟಲ್ ಕಾಸ್ಟ್ ಹಾಗೂ ಪುರಾತನ ಕೃಷಿ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲವೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆಂದರೆ ನಮ್ಮ ರೈತರು ಪರಂಪರಾಗತವಾಗಿ ಇರುವ ಕೃಷಿಯ ಮೇಲೆಯೇ ಶೇಕಡ 80ರಷ್ಟು ಅವಲಂಬಿತವಾಗಿರುವಂಥಾದ್ದು ಇವತ್ತಿಗೂ ಇದೆ. ಇದು ಬಹಳ ಸರಳವೂ ಇದೆ. ಹೆಚ್ಚು ಕಾಸ್ಟ್ ಇಲ್ಲದೆ ಇರುವಂಥಾದ್ದು ಆಗಿದೆ. ಈ ಬೀಜ ಮಸೂದೆ ಬಂದನಂತರ ಪರಂಪರಾಗತವಾಗಿ ಬಂದಿರುವಂತಹ ಕೃಷಿಯ ಭವಿಷ್ಯದ ಗತಿ ಏನು? ಇದರ ಬಗ್ಗೆ ವಿವರವಾಗಿ ಉತ್ತರವನ್ನು ಕೊಟ್ಟಿಲ್ಲ. ಆದುದರಿಂದ ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯನ್ನು ಮಾಡಬೇಕು. ಇದು ರೈತರ ಬದುಕಿಗೆ ಸಂಬಂಧಪಟ್ಟಿದ್ದು, ಯಾರೋ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ಮಾಡಿ, ಒಂದು ಕರಡು ವರದಿಯನ್ನು ಕಳುಹಿಸಿಕೊಟ್ಟು, ಅದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆಂದರೆ ನಾವೆಲ್ಲರೂ ಜನ ಪ್ರತಿನಿಧಿಗಳಾಗಿ ರೈತರ ಹಿತವನ್ನು ಕಾಪಾಡದೇ ಹೋದರೆ ನಾವು ರೈತರಿಗೆ ಅನ್ಯಾಯವನ್ನು ಮಾಡಿದಹಾಗೆ ಆಗುತ್ತದೆ. ದೇಶಕ್ಕೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವಂಥಾದ್ದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ ಈಗ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಸ್ತಾಪ ಮಾಡಿದಂತಹ ವಿಚಾರವನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ಈ ಬೀಜ ಮಸೂದೆ ಏನು ಇದೆ ಇದು ರಾಜ್ಯ ಸರ್ಕಾರದ ಕೈಯಲ್ಲಿ ಇಲ್ಲ, ಕೇಂದ್ರ ಸರ್ಕಾರ ಮಾಡಿರುವಂಥಾದ್ದು. ಇದನ್ನು ಕೇಂದ್ರ ಸರ್ಕಾರ ಮಾಡಿರುವಂಹತ ಕಾನೂನಿನಿಂದಾಗಿ ಇಡೀ ರೈತರು ತಮ್ಮ ಆಸ್ತಿತ್ವವನ್ನು ಕಳೆದುಕೊಳ್ಳುವಂತಹ ಸ್ಥಿತಿ ಬಂದಿದೆ. ಇದಕ್ಕೆ ಪರ್ಯಾಯವಾಗಿ ರಾಜ್ಯಸರ್ಕಾರ ಏನಾದರೂ ಮಾಡುವುದಕ್ಕೆ ಸಾಧ್ಯತೆ ಇದೆಯಾ ಎಂಬ ಬಗ್ಗೆ ಅಷ್ಟೆ ಆಲೋಚನೆ ಮಾಡಬೇಕೇ ಹೊರತು ಈ ಕಾನೂನನ್ನು

ತಿದ್ದುಪಡಿ ಮಾಡುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಈ ಬಹುರಾಷ್ಟ್ರೀಯ ಬೀಜ ಉತ್ಪಾದನೆಯ ಧಾಳಿ ಏನು ಇದೆ. ಇದರಿಂದ ರೈತರು ತಮ್ಮ ಪರಂಪರಾಗತವಾದಂತಹ ಅಸ್ತಿತ್ವವನ್ನೇ ಬೀಜ ಉತ್ಪಾದನೆಯ ವಿಧಾನವನ್ನೇ ಹಾಳು ಮಾಡಿಕೊಂಡು ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮರಾಗುವಂತಹ ಸ್ಥಿತಿ ಈ ಕಾಯಿದೆಯಿಂದ ಏನು ನಿರ್ಮಾಣವಾಗಿದೆ, ಇದಕ್ಕೆ ಏನಾದರೂ ಪರ್ಯಾಯವಾಗಿ ರಾಜ್ಯಸರ್ಕಾರ ಮಾಡಬಹುದಾ ಎನ್ನುವುದನ್ನು ಆಲೋಚನೆಯನ್ನು ಮಾಡಬಹುದೇ ಹೊರತು ನೀವು ಈ ಕಾಯಿದೆಯನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಆ ರೀತಿ ಮಾಡುವುದೆಂದಾರೆ ನಮ್ಮ ರಾಜ್ಯ ವಿಧಾನಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕಾರ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದು. ಇದರಿಂದ ನಮಗೆ ತೊಂದರೆಯಾಗಿದೆ, ಈ ಕಾಯಿದೆಯನ್ನು ತಿದ್ದುಪಡಿ ಮಾಡಬಹುದೆಂದು ಅದನ್ನು ಬದಲಾವಣೆ ಮಾಡುವುದು ಬಿಡುವುದು ಅದು ಅವರಿಗೆ ಬಿಟ್ಟಂತಹ ವಿಚಾರವಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಕೊಡುವ ಪೂರ್ವದಲ್ಲಿ ನಮ್ಮ ಗವರವಾನ್ವಿತ ಹಿರಿಯ ಸದಸ್ಯರಾದ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಹೇಳಿರುವಂತಹ ಆ ವಿಚಾರದಲ್ಲಿ ಸದನದಲ್ಲಿ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಏಕೆಂದರೆ ಈ ಬೀಜದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಬೇಕಾದರೆ, ನಮ್ಮ ರಾಜ್ಯದಲ್ಲಿರುವಂತಹ ರೈತರ ಬಗ್ಗೆ ಆನೇಕ ಸಮಸ್ಯೆಗಳು ಇವೆ. ಇದರ ಬಗ್ಗೆ ಕಳಪೆ ಬೀಜದ ಬಗ್ಗೆ ಎಲ್ಲೂ ಚರ್ಚೆಯಾಗಿಲ್ಲ. ಯಾವ ಯಾವ ಸಂಸ್ಥೆಗಳು ಯಾವ ಯಾವ ಸಂದರ್ಭದಲ್ಲಿ ಕಳಪೆ ದರ್ಜೆಯ ಬೀಜಗಳನ್ನು ಯಾವ್ಯಾವ ಜಿಲ್ಲೆಗಳಲ್ಲಿ ಯಾವ್ಯಾವ ರೈತರಿಗೆ ಮುಟ್ಟಿದೆ, ಯಾವ್ಯಾವ ಸಹಕಾರ ಸಂಘಗಳಿಂದ ಮಾರಾಟ ಮಾಡಿದ್ದಾರೆ. ಖಾಸಗಿ ಕಂಪನಿಯಿಂದ ಎಷ್ಟು ಮಾರಾಟ ಆಗಿದೆ. ಅದರಿಂದ ರೈತರಿಗೆ ಎಷ್ಟು ಲುಕ್ಸಾನ್ ಆಗಿದೆ. ಈ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಆದುದರಿಂದ ದಯಮಾಡಿ ಇದಕ್ಕೆ ಅರ್ಧ ಗಂಟೆ ಚರ್ಚೆಗೆ, ಬೀಜ ಮಸೂದೆ ಮೇಲೆ ಅವಕಾಶವನ್ನು ಕೊಟ್ಟರೆ, ಒಳ್ಳೆಯದೆಂದು ನಾನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರೆ, ಈ ವಿಷಯಕ್ಕೆ ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸುರೇಶ್ ಎಸ್. ಮಾರಿಯಾಳ ಸದಸ್ಯರು ಗೈರುಹಾಜರಿದ್ದಾರೆ. ಮಾನ್ಯ ಬಿ.ಆರ್. ಪಾಟೀಲ್ ರವರ ಪರವಾಗಿ ಮಾನ್ಯ ವೈಜನಾಥ್ ಪಾಟೀಲ್‌ರವರು ಪ್ರಶ್ನೆ ಕೇಳಿ. ಸದಸ್ಯರು ಗೈರು ಹಾಜರಿದ್ದಾರೆ. ಮಾನ್ಯ ಅಪ್ಪಾಸಾಹೇಬ್ (ಅಪ್ಪು) ಮಲಪ್ಪ ಪಟ್ಟಣಶೆಟ್ಟಿಯವರು.